ಧರ್ಮಸ್ಥಳದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಡಿಪೋ ಸ್ಥಾಪನೆ

113 (995) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ಬಸ್ ಡಿಪೋ ವ್ಯಾಪ್ತಿಯಿಂದ ಸಂಚರಿಸುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು? ಸುಸ್ಥಿತಿಯ ಹಳೆಯ ಹಾಗೂ ಹೊಸ ಬಸ್ಸುಗಳ ಸಂಖ್ಯೆ ಎಷ್ಟು?

ಆ) ಈ ಡಿಪೋಕ್ಕೆ ತಾಂತ್ರಿಕ ಪರಿಣತರು ಸೇರಿದಂತೆ ಮಂಜೂರು ಮಾಡಲಾಗಿರುವ ವಿವಿಧ ಸಿಬ್ಬಂದಿ ವರ್ಗದ ವಿವರಗಳೇನು?

ಇ) ಎಷ್ಟು ಹುದ್ದೆಗಳು ಖಾಲಿ ಇವೆ; ಯಾವಾಗ ಅವುಗಳನ್ನು ತುಂಬಲಾಗುವುದು;

ಈ) ಈ ಡಿಪೋದಿಂದ ಯಾವ ಯಾವ ಮಾರ್ಗಗಳಿಗೆ ಬಸ್ಸುಗಳನ್ನು ಓಡಿಸಲಾಗುತ್ತಿದೆ; ಧರ್ಮಸ್ಥಳದ ಬಸ್ಸು ನಿಲ್ದಾಣವನ್ನು ಯಾವಾಗ ವ್ಯವಸ್ಥಿತಿಗೊಳಿಸಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಬೆಳ್ತಂಗಡಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಡಿಪೋ ಬರುವುದಿಲ್ಲ. ಆದರೆ ಬೆಳ್ತಂಗಡಿಯಿಂದ 16 ಕಿ.ಮೀ. ದೂರದಲ್ಲಿರುವ ಧರ್ಮಸ್ಥಳದಲ್ಲಿ ಸಂಸ್ಥೆಯ ಬಸ್ ಡಿಪೋ ಇದ್ದು ಇಲ್ಲಿಂದ ದಿನಂಪ್ರತಿ 94 ಅನುಸೂಚಿಗಳು ನಿರ್ವಹಣೆ ಯಾಗುತ್ತಿದ್ದು ಘಟಕದ ವಾಹನ ಬಲದಲ್ಲಿ 103 ವಾಹಗಳಿವೆ. ಈ ಎಲ್ಲಾ ವಾಹನಗಳು ಸುಸ್ಥಿತಿಯಲ್ಲಿರುತ್ತವೆ.

ಆ) ಈ ಡಿಪೋಗೆ ಮಂಜೂರು ಮಾಡಲಾಗಿರುವ ಯಾಂತ್ರಿಕ ಸಿಬ್ಬಂದಿ 75 ಸೇರಿದಮತೆ 436 ಹುದ್ದೆಗಳನ್ನು ಮಂಜೂರು ಮಾಡಿದೆ. ವಿವರ ಕೆಳಗಿನಂತಿದೆ.

ಯಾಂತ್ರಿಕ	75
ಆಡಳಿತ	21
ಸಂಚಾರ	330
ಲೆಕ್ಕಪತ್ರ	1
ಉಗ್ರಾಣ	1
ಅಂಕಿಅಂಶ	1
ಭದ್ರತಾ	7
ಒಟ್ಟು	**436**

ಇ) ವಿವಿಧ ಸಿಬ್ಬಂದಿ ವರ್ಗಗಳಲ್ಲಿ ಒಟ್ಟು 36 ಹುದ್ದೆಗಳು ಖಾಲಿಯಿವೆ. ಬಸ್ಸುಗಳ ನಿರ್ವಹಣೆ ಮತ್ತು ಕಾರ್ಯಚರಣೆಗೆ ಗಣನೀಯವಾದ ಸಿಬ್ಬಂದಿ ಕೊರತೆ ಇರುವುದಿಲ್ಲ. ಅದಾಗ್ಯೂ ಅವಶ್ಯಕತೆಗನುಗುಣವಾಗಿ ಅವುಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಈ) ಧರ್ಮಸ್ಥಳ ಘಟಕದಿಂದ 94 ಅನುಸೂಚಿಗಳನ್ನು 112 ಮಾರ್ಗಗಳಲ್ಲಿ ಕಾರ್ಯಾಚರಣೆ ಮಾಡುತ್ತಿದ್ದು ಅವುಗಳ ವಿವರಗಳನ್ನು ಅನುಬಂಧ- ಅ ರಲ್ಲಿ ಒದಗಿಸಲಾಗಿದೆ.

ಧರ್ಮಸ್ಥಳದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಲು 7.5 ಎಕರೆ ಜಮೀನನ್ನು ತೆಗೆದುಕೊಂಡಿದ್ದು ನಿಲ್ದಾಣ ನಕ್ಷೆಯನ್ನು ತಯಾರಿಸಲು ವಸ್ತು ಶಿಲ್ಪಯವರಿಗೆ ವಹಿಸಲಾಗಿದೆ. ಜಾಗವನ್ನು ಸಮಗೊಳಿಸಿ ಬಸ್ ನಿಲ್ದಾನವನ್ನು ನಿರ್ಮಿಸಲು ಬರುವ ಆರ್ಥಿಕ ವರ್ಷದಲ್ಲಿ ಕ್ರಮ ಕೈಗೊಳ್ಳಲಾಗುವುದು.

LIST OF ROUTES OPERATED BY DHAMASTHALA DEPOT

Sl No.	Route From	To
1	2	3
1.	Gandibagelu	Nerya
2.	Ujre	Gurepalla
3.	Bedigudda	Panja
4.	Siddaganga	Tumkur
5.	Bolminar	Dhermasthala
6.	Yedamangala	Panja
7.	Ujre	Ujre
8.	Bellal	Ujre
9.	Guruvaynakere	Ujre
10.	Kadaba	Yedamangala
11.	Dharmasthala	Kayarathadaka
12.	Kadaba	Koraja
13.	Belthanugady	Koyool
14.	Kadaba	Panja
15.	Puttur	Uppinangady
16.	Dharmasthala	Gurepalla
17.	Byedadka	Ujre

1	2	3
18.	Belthangady	Dharmasthala
19.	Balapa	Subramanya
20.	Charmadi	Ujre
21.	Bajila	Guruvayanekere
22.	Belthangady	Killur
23.	Puttur	Vittal
24.	Bellal	Dharmasthala
25.	Bolajebail	Kadaba
26.	Dharmasthala	Guruvayanekere
27.	Subramanya	Guthigar
28.	Guruvaryankere	Killur
29.	Guthigere	Subramanya
30.	Belthangady	Chamundi
31.	Annthady	Puttur
32.	Didipe	Ujre
33.	Byedadka	Guruyanakere
34.	Dhamrmasthala	Patrame
35.	Dharmasthala	Charmadi
36.	Chamadi	Dharmasthala
37.	Belthangady	Ganebagelu
38.	Belthangady	Nerya
39.	Kadaba	Subramanya
40.	Dhasrmasthala	Savanai
41.	Belthaangady	Didupe
42.	Dharmasthala	Nelyadi

1	2	3
43.	Dharmasthala	Punjalkatte
44.	Dharmasthala	Koyoor
45.	Dharmasthala	Savanal
46.	Dharmasthala	Ganebagelu
47.	Killur	Dharmasthala
48.	Dharmasthala	Kakkepadavru
49.	Dharmasthala	Nelligudda
50.	Dharmasthala	Sisilla
51.	Dharmasthala	Uppinangady
52.	Kalpane	Puttur
53.	Dharmasthala	Shibaje
54.	Yedamangala	Puttur
55.	Dharmasthala	Kadaba
56.	Kolmogaru	Subramanya
57.	Didupe	Dharmasthala
58.	Dharmasthala	Uppinangady
59.	Pallar	Puttur
60.	Bangalore	Mothakanahalli
61.	Pallar	Puttur
62.	Dharmasthala	Puttur
63.	BC Road	Dharmasthala
64.	Puttur	Yadamangala
65.	Mangalore	Puttur
66.	Mercara	Sulya
67.	Puttur	Sumbramanya

1	2	3
68.	Subramanya	Dharmasthala
69.	Shibaje	Shibaje
70.	Puttur	Shibaje
71.	Dharmasthala	Subramanya
72.	Puttur	Subramanya
73.	Shibaje	Subramanya
74.	Kasaregodu	Puttur
75.	Puttur	Subramanya
76.	Dharmasthala	Subramanya
77.	Shisilla	Uppinangady
78.	Koyoor	Mangalore
79.	Dharmasthala	Mangalore
80.	Kasaragody	Uppinangady
81.	Dharmasthala	Sulya
82.	Subramanya	Puttur
83.	Subremanya	Puttur
84.	Charmadi	Mangalore
85.	Dharmasthala	Subramanya
86	Dharmasthala	Thakeri
87.	Arasikere	Dharmasthala
88.	Dharmasthala	Kasaragodu
89.	Mangalore	Hassan
90.	Dharmasthala	Mysore
91.	Mysore	Dharmasthala
92.	Dharmasthala	Tumkur

1	2	3
93.	Dharmasthala	Mysore
94.	Bangalore	Subramanya
95.	Dharmasthala	Bangalore
96.	Belthangady	Bangalore
97.	Bangalore	Dharmasthala
98.	Dharmasthala	B.R.Hills
99.	Dharmasthala	Kolegala
100.	Mangalore	Bangalore
101.	Dharmasthala	Chikaballapur
102.	Chickaballapur	Dharmasthala
103.	Mangalore	Bangalore
104.	Dharmasthala	Bangalore
105.	Dharmasthala	Chintamani
106.	Dharmasthala	Hospet
107.	Dharmasthala	Hubli
108.	Dharmasthala	Darwar
109.	Dharmasthala	Hubli
110.	Ananthapura	Dharmasthala
111.	Dharmasthala	Hubli
112.	Dharmasthala	Poona

ಶ್ರೀ ಕೆ.ಪ್ರಭಾಕರ ಬಂಗೇರ : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಧರ್ಮಸ್ಥಳದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಲಿಕ್ಕೆ 7.5 ಎಕರೆ ಜಾಗವನ್ನು ಕಾದಿರಿಸಿದ್ದಾರೆ. ನಿಲ್ದಾಣದ ನಕ್ಷೆಯನ್ನು ವಾಸ್ತು ಶಿಲ್ಪಿಯವರಿಗೆ ಕೊಡಲಾಗಿದೆ ಎಂದು ಹೇಳಿದ್ದಾರೆ. ಯಾವಾಗ ಅದು ಆಗುತ್ತದೆ? ಅದಲ್ಲದೇ ಸಮತಟ್ಟನ್ನು ಮಾಡುವ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅದನ್ನು ಯಾವಾಗ ಮಾಡುತ್ತಾರೆ? ಮತ್ತೊಂದು ಪ್ರಶ್ನೆ, ಕಳೆದ ಸಲ ನಾನು ಪ್ರಶ್ನೆ

ಕೇಳಿದಾಗ ಮಾನ್ಯ ಮಂತ್ರಿಗಳು ನನಗೆ ಭರವಸೆ ಕೊಟ್ಟಿದ್ದರು. ಈ ಸಲ ಬರುವ ಆರ್ಥಿಕ ವರ್ಷದಲ್ಲಿ ಮಾಡುತ್ತೇವೆಂದು ಹೇಳುತ್ತಾರೆ. ಅದರ ಒಟ್ಟು ಅಂದಾಜು ಮೌಲ್ಯ ಎಷ್ಟು? ಯಾವಾಗ ಈ ಬಸ್ ನಿಲ್ದಾಣವನ್ನು ಪ್ರಾರಂಭ ಮಾಡುತ್ತಾರೆಂದು ಹೇಳಬೇಕು.

ಶ್ರೀ ಸಿ.ಆರ್ ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಹಿಂದಿನ ಸದನದಲ್ಲಿ ನಾನು ಮಾನ್ಯ ಗೌರವಾನ್ವಿತ ಸದಸ್ಯರಿಗೆ ಆಶ್ವಾಸನೆ ನೀಡಿದ್ದು ಸರಿ. ಆದರೆ ಈ ಬಸ್ ನಿಲ್ದಾಣಕ್ಕೆ ಅಗತ್ಯವಾಗಿ ಬೇಕಾದಂತಹ ಜಾಗವನ್ನು ಸಾರಿಗೆ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ಕೆಲವು ವಿಳಂಬಗಳು ಆಗಿವೆ. ಈಗ ಈ ಜಮೀನನ್ನು ನನ್ನ ಇಲಾಖೆಗೆ ವರ್ಗಾಯಿಸಿ ಕೊಟ್ಟಿದ್ದಾರೆ. ಈಗ ಈ ಬಸ್ ನಿಲ್ದಾಣವನ್ನು ನಿರ್ಮಿಸುವುದರ ಬಗ್ಗೆ ಇಲಾಖೆಗೆ ಆಸಕ್ತಿ ಇದ್ದು, ಇವತ್ತು ಅದರ ನೀಲಿ ನಕಾಶೆ, ಅಂದಾಜು ವೆಚ್ಚದ ಬಗ್ಗೆ ಪಟ್ಟಿಯನ್ನು ನಾವು ಸಿದ್ಧಪಡಿಸಿಕೊಂಡಿದ್ದೇವೆ. ಈ ಸದನ ಮುಗಿದ ತಕ್ಷಣವೇ ಮಾಡಬಹುದು. ಏಕೆಂದರೆ ಅದೊಂದು ಪುಣ್ಯಸ್ಥಳ. ಸಾವಿರಾರು ಜನ, ಲಕ್ಷಾಂತರ, ಜನ ಭಕ್ತಾಧಿಗಳು ಬರುವಂತಹ ಜಾಗಕ್ಕೆ ಒಂದು ಉತ್ತಮವಾದಂತಹ, ಒಂದು ಬೃಹತ್ ಬಸ್ ನಿಲ್ದಾಣವನ್ನು ಕಟ್ಟುವ ಬಗ್ಗೆ ಸರ್ಕಾರಕ್ಕೆ, ಸಾರಿಗೆ ಇಲಾಖೆಗೆ ಆಸಕ್ತಿ ಇದೆ. ಇದರ ಅಂದಾಜು ವೆಚ್ಚ ಪ್ರಾಯಶಃ 80ರಿಂದ 85 ಲಕ್ಷಕ್ಕೆ ಹೋಗಬಹುದು. 2001-2002 ನೆ ಸಾಲಿನಲ್ಲಿ ಅಂದಾಜು ವೆಚ್ಚದಲ್ಲಿ ನಾವು ಇದನ್ನು ಸೇರಿಸಿಕೊಂಡಿದ್ದೇವೆ. ಈ ಸದನ ಮುಗಿದ ತಕ್ಷಣವೇ ಅಂದರೆ ನಮ್ಮ ಆಯವ್ಯಯ ಮಂಡನೆ ಆದ ನಂತರ ಬಸ್ ನಿಲ್ದಾಣದ ಶಂಕು ಸ್ಥಾಪನೆ ಕಾರ್ಯಗಳನ್ನು ನಡೆಸಿಕೊಡುವುದರ ಜೊತೆಗೆ ತಕ್ಷಣ ಬಸ್ ನಿಲ್ದಾಣದ ಕೆಲಸವನ್ನು ಪ್ರಾರಂಭಿಸುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಕೆ. ಪ್ರಭಾಕರ ಬಂಗೇರ : ಧನ್ಯವಾದಗಳು.

11.00 ಎ.ಎಂ.

ಅಧ್ಯಕ್ಷರು : ಮನ್ಯ ಸಾರಿಗೆ ಸಚಿವರೆ, ಮುಳಬಾಗಿಲಿನಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಕುರಿತು ತಾವು ಏನು ಕ್ರಮ ಕೈಗೊಂಡಿದ್ದೀರಿ?

ಶ್ರೀ ಪಿ.ಜಿ.ಆರ್.ಸಿಂಧ್ಯ : ಅಧ್ಯಕ್ಷರೆ, ಈ ಸರ್ಕಾರದಲ್ಲಿ ತಾವೇ ಇಷ್ಟು ನಿಸ್ಸಹಾಯಕರಾದರೆ ಇನ್ನು ಮಾನ್ಯ ಸದಸ್ಯರ ಗತಿ ಏನು?

ಅಧ್ಯಕ್ಷರು : ಪ್ರೋಟೋಕಾಲ್ ಪ್ರಕಾರ ನಾನು ಯಾವುದೇ ಪ್ರಶ್ನೆ ಕಳುಹಿಸುವಂತಿಲ್ಲ. ಸೂಚನಾ ಪತ್ರಗಳನ್ನು ಕಳುಹಿಸುವಂತಿಲ್ಲ ಹಾಗೂ ಯಾವುದೇ ಸಭೆಯಲ್ಲೂ ಸಹಾ ಭಾಗವಹಿಸುವಂತಿಲ್ಲ. ಆದಕಾರಣ, ನನ್ನ ಕ್ಷೇತ್ರದ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಯಾವ ವಿಧದಲ್ಲಿ ಪ್ರಶ್ನೆ ಕೇಳಬೇಕು?

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳಾಗಿರುವವರು ತಮ್ಮ ಆಜ್ಞೆಗೆ ಕಾಯಬೇಕು. ಅದು ಬಿಟ್ಟು ಸರ್ಕಾರದವರು ತಮ್ಮನ್ನು ಇವೊತ್ತು ಯಾವ ಸ್ಥಿತಿಗೆ ತಂದಿದ್ದಾರೆ ನೋಡಿ! ತಮಗೆ ಇಷ್ಟೊಂದು ಅಸಹಾಯಕತೆ ಪರಿಸ್ಥಿತಿಯೊದಗಿ ತಮ್ಮ ಕ್ಷೇತ್ರದ ಕುಂದು-ಕೊರತೆಗಳಿಗೆ ಸಂಬಂಧಿಸಿದಂತೆ ಸದನದಲ್ಲಿಯೇ ತಾವು ಪ್ರಸ್ತಾಪಿಸುತ್ತಿರುವುದರ ಕುರಿತು ಹೇಳುತ್ತಿದ್ದೇನೆ.

ಅಧ್ಯಕ್ಷರು: ಪ್ರೋಟೋಕಾಲ್ ಪ್ರೊಸೀಜರ್ ಆ ರೀತಿ ಇದೆ. ನಾನೇನೂ ಅಸಹಾಯಕನಲ್ಲ, ನನಗೆ ಅಂತಹ ಪರಿಸ್ಥಿತಿ ಬಂದಿಲ್ಲ.

ಶ್ರೀ ಸಿ.ಬೈರೇಗೌಡ : ನಾನು ಸಾರ್ವಜನಿಕರ ಪರವಾಗಿ ಒತ್ತಾಯಿಸುತ್ತಿದ್ದೇನೆಂದರೆ, ಮುಳಬಾಗಿಲಿನಲ್ಲಿ ಬಸ್ ನಿಲ್ದಾಣ ಕಾಮಗಾರಿಯನ್ನು ಎಷ್ಟು ಕಾಲಾವಧಿಯಲ್ಲಿ ಕಾರ್ಯಗತಗೊಳಿಸಲಾಗುತ್ತದೆ?

ಶ್ರೀ ಸಿ. ಆರ್.ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ತಮ್ಮ ಬೇಡಿಕೆಯ ಪತ್ರ ನನಗೆ ತಲುಪಿದ್ದು, ಮುಳಬಾಗಿಲಿನಲ್ಲಿ ಬಸ್ ನಿಲ್ದಾಣದ ಕಾಮಗಾರಿ ಪ್ರಾರಂಭಿಸಲು ಜಾಗ ಒದಗಿಸಿಕೊಡುವಂತೆ ಆ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಕಳುಹಿಸಿ ಕೊಟ್ಟಿದ್ದು, ಜಾಗ ಒದಗಿಸಿದ ತಕ್ಷಣವೇ ಬಸ್ ನಿಲ್ದಾಣ ಕಾರ್ಯ ಕೈಗೆತ್ತಿಕೊಳ್ಳುತ್ತೇವೆ.

ಶ್ರೀ ಪಿ.ಜಿ.ಆರ್ ಸಿಂಧ್ಯಾ : ಅಧ್ಯಕ್ಷರೆ, ನಾನು ನಿಮ್ಮ ಸಹಾಯಕ್ಕಾಗಿ ಬರುತ್ತಿದ್ದೇನೆ. ಇದೇ ಉತ್ತರವನ್ನು 1985, 87 ಮತ್ತು 97ನೇ ಇಸವಿಯಲ್ಲೂ ಕೊಡಲಾಗಿದೆ. ಧರ್ಮಸ್ಥಳ ಹಾಗೂ ಬೆಳ್ತಂಗಡಿಯಲ್ಲಿ ಬಸ್ ಡಿಪೋ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡುವುದಾಗಿ ತಿಳಿಸಿರುವುದಕ್ಕೆ ನಾನು ಮಾನ್ಯ ಸಾರಿಗೆ ಸಚಿವರನ್ನು ಅಭಿನಂದಿಸುತ್ತೇನೆ. ನೀವು (ಅಧ್ಯಕ್ಷರು) ಉಪ ಪ್ರಶ್ನೆ ಕೇಳಿದ್ದಕ್ಕೆ ಸಾರಿಗೆ ಸಚಿವರು ಕೊಟ್ಟಿರುವಂಥ ಉತ್ತರವನ್ನು ನಾನು 1985, 87 ಮತ್ತು 97 ರಲ್ಲಿ ಸಾರಿಗೆ ಮಂತ್ರಿಯಾಗಿದ್ದಗಲೂ ಸಹ ಇದೇ ಪ್ರಶ್ನೆ ಬಂದಾಗ ಈಗ ಸಾರಿಗೆ ಮಂತ್ರಿಗಳು ಕೊಟ್ಟಿರುವ ಉತ್ತರವನ್ನೇ ಕೊಡಲಾಗಿದೆ. ಆದುದರಿಂದ, ನಾನು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುವುದೇನೆಂದರೆ, ಮುಳಬಾಗಿಲಿನಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಹಣ ಕೊಟ್ಟು ಜಾಗವನ್ನು ಪಡೆಯುವುದಕ್ಕೆ ಕ್ರಮ ಕೈಗೊಳ್ಳಬೇಕು.

ಅಧ್ಯಕ್ಷರು: ಜಾಗ ಪಡೆಯಲು ಹಣವೇನೂ ಕೊಡಬೇಕಾಗಿಲ್ಲ, ಅದು ಸರ್ಕಾರಕ್ಕೆ ಸೇರಿರುವಂಥ ಜಮೀನಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅಲ್ಲಿ ಕೆರೆ ಇರುವ ಜಾಗವನ್ನು ಕೊಡುತ್ತಾರೆ, ಅದು ಉಪಯೋಗವಿಲ್ಲ. ಆದುದರಿಂದ, ಹಣ ಕೊಟ್ಟು ಜಾಗ ಪಡೆದುಕೊಂಡು ವ್ಯವಸ್ಥಿತವಾದ ಬಸ್ ನಿಲ್ದಾಣವನ್ನು ಮಾನ್ಯ ಸಚಿವರು ಕಟ್ಟಿಸಿಕೊಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯರವರು ಮಾಜಿ ಸಾರಿಗೆ ಮಂತ್ರಿಗಳಾಗಿದ್ದು, ಅವರ ಜಾಗದಲ್ಲಿ ನಾನು ಇವೊತ್ತು ಕುಳಿತಿದ್ದೇನೆ. ಅವರು ಮೂರು ಬಾರಿ ಏನು ಉತ್ತರ ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಆದುದರಿಂದ, ಅವರಿಗೂ (ಅಧ್ಯಕ್ಷರಿಗೂ) ನನಗೂ ಗೌರವ ಬರುವಂತೆ ತಾವು (ಸಿಂಧ್ಯ) ಹೇಳಿರುವಂಥ ಕೆಲಸವನ್ನು ನಾನು ಮಾಡುತ್ತೇನೆ.

ಆನೇಕಲ್‌ನ ಬಸ್ ನಿಲ್ದಾಣ ನಿರ್ಮಾಣ

1161(948) ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?